ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ 117 ನಿಯೋಜನೆ 2017-18 ವ&ನಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:25-01-2018

## ಸುತ್ತೋಲೆ

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಸಿಬ್ಬಂದಿಗಳ ವರ್ಗಾವಣೆ/ನಿಯೋಜನೆ/ ಹುದ್ದೆ ಸ್ಥಳಾಂತರದ ಬಗ್ಗೆ.

*****

ಕಾಲೇಜು ಶಿಕ್ಷಣ ಇಲಾಖೆಯ ಕಛೇರಿ/ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರ 2017-18ನೇ ಸಾಲಿನ ವರ್ಗಾವಣೆ ಪ್ರಕ್ರಿಯೆಗಳು ಈಗಾಗಲೇ ಮುಕ್ತಾಯಗೊಂಡಿರುತ್ತದೆ. ಆದಾಗ್ಯೂ ಹಲವಾರು ಸಿಬ್ಬಂದಿ ವರ್ಗದವರು ಜನಪ್ರತಿನಿಧಿಗಳಿಂದ ಶಿಫಾರಸ್ಸು ಪತ್ರಗಳನ್ನು ಸಲ್ಲಿಸಿ ವರ್ಗಾವಣೆ/ನಿಯೋಜನೆ/ಹುದ್ದೆ ಸ್ಥಳಾಂತರ ಕೋರಿ ಒತ್ತಡಗಳನ್ನು ಹಾಕುತ್ತಿರುವುದನ್ನು ಗಮನಿಸಲಾಗಿದೆ.

ಈಗಾಗಲೇ ಅಧೀನ ಸಿಬ್ಬಂದಿ ವರ್ಗದವರಿಂದ ವರ್ಗಾವಣೆ/ನಿಯೋಜನೆ/ಹುದ್ದೆ ಸ್ಥಳಾಂತರ ಕೋರಿ ಸಲ್ಲಿಸಲಾದ ಮನವಿಗಳ ಬಗ್ಗೆ ಪರಿಶೀಲಿಸಲಾಗಿದ್ದು ಶೈಕ್ಷಣಿಕ ವರ್ಷದ ಮಧ್ಯ ಭಾಗದಲ್ಲಿರುವುದರಿಂದ ಸದರಿ ಕೋರಿಕೆಗಳನ್ನು ಪುರಸ್ಕರಿಸಿರುವುದಿಲ್ಲ. ಒಮ್ಮೆ ತಿರಸ್ಕೃತವಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಮತ್ತೊಮ್ಮೆ ಶಿಫಾರಸ್ಸು ಪತ್ರಗಳನ್ನು ಸಲ್ಲಿಸಿ ಮೇಲಧಿಕಾರಿಗಳಿಗೆ ಅನಗತ್ಯ ಒತ್ತಡಗಳನ್ನು ಹಾಕುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ.

ಈ ರೀತಿ ಶೈಕ್ಷಣಿಕ ವರ್ಷದ ಮಧ್ಯ ಭಾಗದಲ್ಲಿ ವರ್ಗಾವಣೆ/ನಿಯೋಜನೆ/ಹುದ್ದೆ ಸ್ಥಳಾಂತರ ಕೋರಿ ಮನವಿಗಳನ್ನು/ಶಿಫಾರಸ್ಸುಗಳನ್ನು ಸಲ್ಲಿಸಿ ಅನಗತ್ಯ ಒತ್ತಡಗಳನ್ನು ಹಾಕುವುದನ್ನು ಗಂಭೀರವಾಗಿ ಪರಿಗಣಿಸಿದ್ದು ಅಂತಹ ಸಿಬ್ಬಂದಿ ವರ್ಗದವರ ವಿರುದ್ಧ ಕರ್ನಾಟಕ ನಾಗರೀಕ ಸೇವೆಗಳ (ನಡವಳಿ) ನಿಯಮಗಳನ್ವಯ ಶಿಸ್ತು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಲಾಗಿದೆ. ಆದಾಗ್ಯೂ ಕಾರ್ಯಭಾರವಿಲ್ಲದ ಪ್ರಕರಣಗಳಲ್ಲಿ ಪ್ರಾಂಶುಪಾಲರು ದೃಢೀಕರಿಸಿ ಶಿಫಾರಸ್ಸು ಮಾಡಿದ ಪ್ರಕರಣಗಳನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು.

**(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)**

Sd/-

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

**ಇವರಿಗೆ:**

1. ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ-ಮಾಹಿತಿಗಾಗಿ.
2. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು/ಪ್ರಭಾರಿ ಪ್ರಾಂಶುಪಾಲರುಗಳಿಗೆ-ಮಾಹಿತಿಗಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು- (ಇಲಾಖಾ ವೆಬ್‌ಸೈಟ್ ನಲ್ಲಿ ಪ್ರಕಟಿಸಲು).
4. ಕಛೇರಿ ಪ್ರತಿ.

*DCE 117 Circular*